# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 115 |
| ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಅರವಿಂದ ಕುಮಾರ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 05.07.2023 |
| ಉತ್ತರಿಸುವ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೀದರ ಜಿಲ್ಲೆಯಲ್ಲಿರುವ ಕರ್ನಾಟಕ ಪಶು ವಿಶ್ವವಿದ್ಯಾಲಯ ಮತ್ತು ಇಲಾಖೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಹೊರಗುತ್ತಿಗೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ; (ಹುದ್ದೆವಾರು ವಿವರ ನೀಡುವುದು)</td><td>ಕರ್ನಾಟಕ ಪಶುವೈದ್ಯಕೀಯಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ನಲ್ಲಿ ಕಳೆದ 4 ವರ್ಷಗಳಲ್ಲಿ ಸಿಬ್ಬಂದಿಗಳನ್ನು ಇ-ಪ್ರೋಕ್ಯೂರಮೆಂಟ್ ಟೆಂಡರ್ ಮೂಲಕ ನೇಮಕ ಮಾಡಲಾಗಿರುತ್ತದೆ.<br>ವಿವರ ಈ ಕೆಳಕಂಡಂತಿದೆ.<br><table><tr><th>ಕ್ರ. ಸಂ</th><th>ವರ್ಷ</th><th>ಭದ್ರತಾ ಸಿಬ್ಬಂದಿ ಸಂಖ್ಯೆ</th><th>ಸ್ವಚ್ಛತಾ ಸಿಬ್ಬಂದಿ ಸಂಖ್ಯೆ</th></tr><tr><td>1</td><td>2019-20</td><td>290</td><td>125</td></tr><tr><td>2</td><td>2020-21</td><td>290</td><td>125</td></tr><tr><td>3</td><td>2021-22</td><td>234</td><td>158</td></tr><tr><td>4</td><td>2022-23</td><td>234</td><td>158</td></tr></table><br>ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಈ ಕೆಳಕಂಡಂತೆ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಪಡೆಯಲಾಗುತ್ತಿದೆ.<br><table><tr><th>ಕ್ರ.ಸಂ</th><th>ಹುದ್ದೆ</th><th>ಸಂಖ್ಯೆ</th></tr><tr><td>1.</td><td>ವಾಹನ ಚಾಲಕರು</td><td>01</td></tr><tr><td>2.</td><td>ಡಿ ದರ್ಜೆ ನೌಕರರು</td><td>85</td></tr></table></td></tr>
<tr><td>ಆ)</td><td>ಸದರಿ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಯನ್ನು ಇಲಾಖೆ ಮೂಲಕ ನಡೆಸಲಾಗಿದೆಯೇ; ಅಥವಾ ಏಜೆನ್ಸಿ ಮೂಲಕ ತೆಗೆದುಕೊಳ್ಳಲಾಗಿದೆಯೇ;</td><td>ಕರ್ನಾಟಕ ಪಶುವೈದ್ಯಕೀಯಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಹಾಗೂ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇಲ್ಲಿ ಸದರಿ ಸಿಬ್ಬಂದಿಗಳನ್ನು ಏಜೆನ್ಸಿ ಮೂಲಕ ತೆಗೆದುಕೊಳ್ಳಲಾಗಿದೆ</td></tr>
<tr><td>ಇ)</td><td>ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವಾಗ ಮೀಸಲಾತಿ ಅನುಸರಿಸಲಾಗಿದೆಯೇ; ಅಥವಾ ಇಲ್ಲವೇ;</td><td>ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವಾಗ ಟೆಂಡರ್ ಕರೆದು ಕೆಲಸದ ಆದೇಶ ನೀಡಿದ ನಂತರದಲ್ಲಿ, ಏಜೆನ್ಸಿಗಳ ಮುಖಾಂತರ ಒದಗಿಸಿದ ಸಿಬ್ಬಂದಿಗಳ ಮೂಲಕ ಸೇವೆಯನ್ನು ಪಡೆಯಲಾಗುತ್ತಿರುವುದರಿಂದ, ಯಾವುದೇ ಮೀಸಲಾತಿ ಅನುಸರಿಸಿರುವುದಿಲ್ಲ.</td></tr>
</table>

| | | |
|---|---|---|
| ಈ) | ಮೀಸಲಾತಿ ಅನುಸರಿಸಿದಲ್ಲಿ ನೇಮಕ ಮಾಡಿಕೊಂಡ ಸಿಬ್ಬಂದಿಗಳಲ್ಲಿ ಯಾವ ಯಾವ ವರ್ಗಗಳ ವಿಂಗಡಣೆ ಮಾಡಿ ನೇಮಕ ಮಾಡಿಕೊಳ್ಳಲಾಗಿದೆ; ಅನುಸರಿಸದಿದ್ದಲ್ಲಿ, ಸಿಬ್ಬಂದಿಗಳ ಜಾತಿವಾರು ಹುದ್ದೆವಾರು ವಿವರ ನೀಡುವುದು? | ಅನ್ವಯವಾಗುವುದಿಲ್ಲ. |

**ಸಂಖ್ಯೆ: ಪಸಂಮೀ ಇ-133 ಪಅಸೇ 2023**

(ಕೆ. ವೆಂಕಟೇಶ್)
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**